**PW- 1**

**ದಿನಾಂಕಃ 24.01.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎಲ್ ವಿ ಡಿ ವಕೀಲರಿಂದಃ**

1. ದಿಃ 17-03-2021 ರಂದು ಅಪಘಾತ ಸಂಭವಿಸಿದೆ. ಬಸ್ ಸಂಖ್ಯೆ ಕೆ ಎ 42 ಎಫ್ 1380 ಅಂತಾ ಇತ್ತು. ನಾನು ಹಾವೇರಿಯಿಂದ ರಾಣೆಬೆನ್ನೂರಿಗೆ ಬರುತ್ತಿದೆ. ನಾನು ಕೆ ಎಸ್ ಆರ್ ಟಿ ಸಿಯಲ್ಲಿ ಸಿಬ್ಬಂದಿ ಇಲಾಖೆಯಲ್ಲಿ ಕಚೇರಿ ಸಹಾಯಕನೆಂದು ಹಾವೇರಿಯಲ್ಲಿ ಕೆಲಸ ಮಾಡುತ್ತಿದ್ದೆ.ನಾನು ರಾಣೆಬೆನ್ನೂರಿನಲ್ಲಿ ವಾಸ ಇದ್ದು ಹಾವೇರಿಗೆ ಕೆಲಕ್ಕೆ ಹೋಗಿ ಬಂದು ಮಾಡುತ್ತೆನೆ. ನಾನು ಬಸ್ಸಿನಲ್ಲಿ ಓಡಾಡಲು ಗುರುತಿನ ಚೀಟಿ ಕೊಟ್ಟಿರುತ್ತಾರೆ. ಆ ದಾಖಲೆಯನ್ನು ನ್ಯಾಯಾಲಯಿಕ್ಕೆ ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ಸಾಕ್ಷಿ ತನ್ನ ಜೇಬಿನಿಂದ ತನ್ನ ಗುರುತಿನ ಚೀಟಿ ತೋರಿಸಿರುತ್ತಾರೆ. ನಾನು ಆ ದಿನ ಆ ಬಸ್ಸಿನಿಂದ ರಾಣೆಬೆನ್ನೂರಿಗೆ ಬರುತಿರಲಿಲ್ಲ ಅದೇ ಕಾರಣಕ್ಕಾಗಿ ನನ್ನ ಗುರುತಿನ ಚೀಟಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಬಸ್ ನಲ್ಲಿ ಬರುವಾಗ ನಾನು ಡ್ರೈವರ್ ಹಿಂಬದಿ ಆಸನದಲ್ಲಿ ಕುಳಿತಿದ್ದೆ. ಬಸ್ಸಿನಲ್ಲಿ ಚಾಲಕ ನಿದಾನಗತಿಯಲ್ಲಿ ಬಸ್‌ನ್ನು ಓಡಿಸುತ್ತಿದ್ದ ಎಂದರೆ ಸರಿಯಲ್ಲ.

2. ಸದರಿ ಆ ಸ್ಥಳದಲ್ಲಿ ರಸ್ತೆ ಕಾಮಗಾರಿ ನಡೆಯುತಿತ್ತು ಎಂದರೆ ಸರಿಯಲ್ಲ. ನಾನೇ ಸ್ವತಃ ಕೆಳಗಡೆ ಬಿದ್ದು ಗಾಯ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಿಲ್ಲ. ಮೊದಲು ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆ ಹಾವೇರಿಗೆ ಹೋಗಿರುತ್ತೇನೆ. ಸದರಿ ಸಂಸ್ಥತೆವತಿಯಿಂದ ತತಕ್ಷಣ ಪರಿಹಾರ ಹಣವನ್ನು ಕೊಡುತ್ತಾರೆ ಎಂದರೆ ಸರಿಯಲ್ಲ. ಅಪಘಾತ ಆದ ತಕ್ಷಣ ನಮ್ಮ ಇಲಾಖೆಗೆ ಮಾಹಿತಿ ಕೊಟ್ಟಿರುತ್ತೇನೆ. ಆ ಕುರಿತು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಅವುಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಈ ಅಪಘಾತದಲ್ಲಿ ನನಗೆ ಯಾವುದೇ ತೊಂದರೆ ಆಗಿಲ್ಲ ಆದ್ದರಿಂದ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

3. ನನಗೆ ಹಾವೇರಿಯಿಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಹುಬ್ಬಳ್ಳಿಯ ಎಸ್ ಡಿ ಎಂ ಆಸ್ಪತ್ರೆಗೆ ಹೋಗಿ ಎಂದು ತಿಳಿಸಿದ್ದರಿಂದ ನಾನು ಹೋಗಿರುತ್ತೇನೆ. ಹುಬ್ಬಳ್ಳಿಯ ಎಸ್ ಡಿ ಎಂ ಆಸ್ಪತ್ರೆಗೆ ಹೋಗಿ ಎಂಬ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಎಸ್ ಡಿ ಎಂ ಆಸ್ಪತ್ರೆಯಲ್ಲಿ ಸುಮಾರು 2 ತಿಂಗಳು ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ರಜೆಯನ್ನು 100 ದಿನಗಳವರೆಗೆ

**PW-**

ಮಂಜೂರು ಮಾಡಿರುತ್ತಾರೆ. ಮಂಜೂರು ಆದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ನನಗೆ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇದೆ ಎಂದು ನಾನು ಅರ್ಜಿ ಸಲ್ಲಿಸಿಲ್ಲ. ನಾನು ಸಹಾಯಕ ಅಂದರೆ ಗುಮಾಸ್ತನ ಕೆಲಸ ಮಾಡುತ್ತಿದ್ದೆ. ಆಗ ನನ್ನ ಸಂಭಳ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ನನಗೆ ಆ ತಿಂಗಳ ಸಂಭಳದ ದಾಖಲೆಯನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನನಗೆ ಅಪಘಾತ ಆದ ಸಮಯದಲ್ಲಿ ನನ್ನ ಸಂಭಳದ ದಾಖಲೆ ಹಾಜರು ಪಡಿಸಲು ತೊಂದರೆ ಇಲ್ಲ.

4. ನನಗೆ 40 ಸಾವಿರ ಸಂಭಳ ಇದೆ ಎಂದು ತೋರಿಸಲು ನನ್ನ ಸಂಭಳದ ಪತ್ರದ ಆದಾರದ ಮೇರೆಗೆ ಹೇಳಿರುತ್ತೇನೆ. ನಮ್ಮ ಪ್ರಮಾಣ ಪತ್ರದಲ್ಲಿ ಬರೆದಿದಕ್ಕು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ವಿಷಯಕ್ಕೂ ಒಂದೊಕ್ಕೊಂದು ಸಂಬಂದ ಇಲ್ಲ. 2021 ರಲ್ಲಿ ನನ್ನ ಸಂಬಳದ ದಾಖಲೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ಈಗಲೂ ಕೂಡಾ ನಾನು ಕಚೇರಿಯ ಸಹಾಯಕನೆಂದು ಕೆಲಸ ಮಾಡುತ್ತೇನೆ. ಡಿಸೆಂಬರ್ 2024 ರಲ್ಲಿ ನನ್ನ ಸಂಭಳ ಅಂದಾಜು 43 ಸಾವಿರ ಚಿಲ್ಲರೆ ಬಂದಿರುತ್ತದೆ. ಅಪಘಾತ ಆದ ನಂತರ ಇಲ್ಲಿಯವರೆಗೆ ನನ್ನ ಸಂಭಳ ಹಚ್ಚಿಗೆ ಆಗಿದೆ ಹೊರತು ಕಡಿಮೆ ಆಗಿಲ್ಲ. ಈಗಲೂ ಕೂಡಾ ನಾನು ಗುಮಾಸ್ತನ ಕೆಲಸ ಮಾಡುತ್ತಿದ್ದೇನೆ ಎಂದರೆ ನಿಜ. ವೈದ್ಯರು ನನಗೆ ಕೆಲಸ ಮಾಡಲು ತೊಂದರೆ ಇದೆ ಎಂದು ಯಾವುದೇ ದಾಖಲೆ ನೀಡಿಲ್ಲ ಎಂದರೆ ನಿಜ. ಈಗಲೂ ಕೂಡಾ ನನಗೆ ಕೆಲಸ ಮಾಡಲು ಯಾವುದೇ ತೊಂದರೆ ಇರದೇ ಇದ್ದರು ಸಹ ನಾನು ಓಂ ಆಸ್ಪತ್ರೆಯಿಂದ ಸುಳ್ಳು ಪ್ರಮಾಣ ಪತ್ರ ಸಲಿಲಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಚೇರಿಯಿಂದ ನನಗೆ ಕೆಲಸದಲ್ಲಿ ಮಾಡಲು ಯಾವುದೇ ತೊಂದರೆ ಇಲ್ಲ ಮತ್ತು ಕೆಲಸ ಆಗುವುದಿಲ್ಲ ಎಂದು ಯಾವುದೇ ರೀತಿಯಿಂದ ಕೆಲಸಕ್ಕೆ ಕಿರುಕುಳ ಕೊಟ್ಟಿಲ್ಲ.

**ಪಾಟೀ ಸವಾಲುಃ** 2 ನೇ ಎದುರುದಾರರ ಪರ ವಕೀಲರಾದ ಶ್ರೀ. ಎಲ್ ವಿ ಡಿ ವಕೀಲರು ಸಮಯವಕಾಶ ಕೋರಿದ್ದರಿಂದ ಸಮಯ ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ